## ಕರ್ನಾಟಕ ಸರ್ಕಾರ

**ವಿಷಯ: ಸಕಾಲ ಯೋಜನೆಯಡಿ ನಾಗರೀಕರಿಗೆ ಪಾವತಿಸಬೇಕಾದ ಪರಿಹಾರ ವೆಚ್ಚವನ್ನು ಇನ್ನು ಮುಂದೆ ಆಯಾ ಇಲಾಖೆಯ Nodal Officer ಗಳು ಇಲಾಖೆಯ ಬ್ಯಾಂಕ್ ಖಾತೆಯಿಂದಲೇ ಡಿ.ಬಿ.ಟಿ ವೇದಿಕೆಯ ಮೂಲಕ ಪಾವತಿಸುವ ಬಗ್ಗೆ.**

**ಓದಲಾಗಿದೆ:-**

1. ಸರ್ಕಾರದ ಅಧಿಸೂಚನೆ ಸಮಖ್ಯೆ: ಸಿಆಸುಇ 28 ಇಕಾಅ 2012 ದಿ:28.03.2012.
2. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ರ ಕಲಂ (9).
3. ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರಡಿಯ ನಿಯಮ 6(3).

**ಪ್ರಸ್ತಾವನೆ:-**

ಮೇಲೆ ಓದಲಾದ (1)ರಲ್ಲಿನ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ನ್ನು ದಿ:02.04.2012ರಿಂದ ರಾಜ್ಯಾದ್ಯಂತ ಜಾರಿಗೆ ತರಲಾಗಿದೆ.

ಮೇಲೆ (2)ರಲ್ಲಿ ಓದಲಾದ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಮತ್ತು (ತಿದ್ದುಪಡಿ) ಅಧಿನಿಯಮ, 2014ರ ಕಲಂ (9) ರಲ್ಲಿ "ಗೊತ್ತುಪಡಿಸಿದ ಸಮಯದೊಳಗೆ ನಾಗರೀಕ ಸಂಬಂಧಿ ಸೇವೆಗಳ ವಿಲೇಯಲ್ಲಿ ನಾಗರೀಕರಿಗೆ ನೀಡಲು ವಿಫಲರಾಗಿರುವಂಥ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಅಥವಾ ಆತನ ಅಧೀನದಲ್ಲಿರುವ ಸಾರ್ವಜನಿಕ ನೌಕರನು, ವಿಳಂಬದ ಅವಧಿಗೆ ಅರ್ಜಿಯೊಂದಕ್ಕೆ ಗರಿಷ್ಟ ಐದು ನೂರು ರೂಪಾಯಿಗಳಿಗೆ ಒಳಪಟ್ಟು ದಿನ ಒಂದಕ್ಕೆ ಇಪ್ಪತ್ತು ರೂಪಾಯಿಗಳಂತೆ, ಅದನ್ನು ನೀಡುವುದಕ್ಕಾಗಿ ಸರ್ಕಾರದಿಂದ ನಿಷೇಧ ಅಥವಾ ನಿರ್ಬಂಧ ಇಲ್ಲದಿದ್ದರೆ, ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು" ಎಂದು ತಿಳಿಸಲಾಗಿದೆ.

ಮೇಲೆ (3) ರಲ್ಲಿ ಓದಲಾದ ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರ ನಿಯಮ 6 (3) ರಲ್ಲಿ "ಪರಿಹಾರ ವೆಚ್ಚಕ್ಕಾಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅರ್ಜಿದಾರನು ಅರ್ಹನಾದ ಪರಿಹಾರ ವೆಚ್ಚವನ್ನು ಸಕ್ಷಮ ಅಧಿಕಾರಿಯು ಆನ್‌ಲೈನ್ ಮಾಹಿತಿ ಆಧಾರದ ಮೇಲೆ ಮೌಲ್ಯಮಾಪನ ಮಾಡತಕ್ಕದ್ದು ಮತ್ತು ಅದನ್ನು ಪಾವತಿ ಮಾಡುವುದಕ್ಕೆ ಕಚೇರಿಯ ಇಂಪ್ರುಸ್ಟ್ ಮೊತ್ತದಿಂದ ತಕ್ಷಣ ಪಾವತಿಸಿ ಸ್ವೀಕೃತಿ ಸಹಿಯನ್ನು ಪಡೆಯತಕ್ಕದ್ದು, ತದನಂತರ ಆತನು 11ನೇ ಪ್ರಕರಣದ ಅಡಿಯಲ್ಲಿ ಅನುಸೂಚಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ತಪ್ಪಿತಸ್ಥ ಸಾರ್ವಜನಿಕ ನೌಕರನಿಂದ ಅದನ್ನು 30 ದಿನಗಳಲ್ಲಿ ವಸೂಲು ಮಾಡಲು ಕ್ರಮವಹಿಸತಕ್ಕದ್ದು" ಎಂದು ತಿಳಿಸಲಾಗಿದೆ.

ನಾಗರೀಕರಿಗೆ ಪರಿಹಾರ ವೆಚ್ಚವನ್ನು ತ್ವರಿತವಾಗಿ ಪಾವತಿಸಬೇಕಾದ ಅಗತ್ಯತೆಯನ್ನು ಸರ್ಕಾರವು ಪರಿಗಣಿಸಿರುತ್ತದೆ. ಅದರಂತೆ, ನಾಗರೀಕರಿಗೆ ಪರಿಹಾರ ವೆಚ್ಚವನ್ನು ಆಯಾ ಇಲಾಖೆಯ Nodal Officer ಮೂಲಕ ನಿರ್ವಹಿಸಲು ಒಂದು ಕೇಂದ್ರೀಕೃತ ವ್ಯವಸ್ಥೆಯನ್ನು ರೂಪಿಸುವ ಅವಶ್ಯಕತೆ ಇದೆ. ಮುಂದುವರೆದು, ಸದರಿ ಪರಿಹಾರ ವಚ್ಚವನ್ನು ಇಲಾಖೆ ನೋಡಲ್ ಅಧಿಕಾರಿಯೂ ನಾಗರೀಕರಿಗೆ ತ್ವರಿತವಾಗಿ ಹಾಗೂ ನೇರವಾಗಿ ಅವರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಪಾವತಿಸುವ ಅವಶ್ಯಕತೆ ಇದೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 13 ಎಸ್.ಎ.ಎಂ 2021**
**ಬೆಂಗಳೂರು, ದಿನಾಂಕ: 05.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ಇಲಾಖೆಗಳು / ಸಂಸ್ಥೆಗಳು ಸಕಾಲ ಯೋಜನೆಯಡಿ ನಾಗರೀಕರಿಗೆ ಪರಿಹಾರ ವೆಚ್ಚವನ್ನು ಪಾವತಿಸಲು ಈ ಕೆಳಗಿನಂತೆ ವ್ಯವಸ್ಥೆಯನ್ನು ಅನುಸರಿಸುವಂತೆ ಈ ಮೂಲಕ ಅದೇಶಿಸಿದೆ.

1. ನಾಗರೀಕರು ಸಕಾಲ ಜಾಲತಾಣದಲ್ಲಿ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ ನಂತರ ಸಕಾಲ ತಂತ್ರಾಂಶವು ಆ ದಿನದವರೆಗಿನ ಪರಿಹಾರವನ್ನು ಲೆಕ್ಕಚಾರಮಾಡಿ ಆ ವಿವರಗಳನ್ನು ಸ್ವಯಂಚಾಲಿತವಾಗಿ ಡಿ.ಬಿ.ಟಿ ವೇದಿಕೆಗೆ ಕಳುಹಿಸಲಾಗುವುದು. ಅದೇ ರೀತಿ ನಾಗರೀಕರು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅವರಿಗೆ ಒದಗಿಸಬೇಕಾದ ಸೇವೆಯು ಇನ್ನು ವಿಲೇವಾರಿ ಅಗದೆ ಇರುವಂತಹ ಸಂದರ್ಭದಲ್ಲಿ, ಇಲಾಖೆಯಲ್ಲಿ ನಾಗರೀಕರ ಸೇವೆಯ ಅರ್ಜಿಯು ವಿಲೇವಾರಿ ಮಾಡಿದ ತಕ್ಷಣ ಸಕಾಲ ತಂತ್ರಾಂಶದಲ್ಲಿ ಸ್ವಯಂ ಚಾಲಿತವಾಗಿ ಬಾಕಿ ಉಳಿದ ಪರಿಹಾರ ವೆಚ್ಚವನ್ನು ಲೆಕ್ಕಚಾರ ಮಾಡಿ ಆ ವಿವರಗಳನ್ನು ಡಿ.ಬಿ.ಟಿ ವೇದಿಕೆಗೆ ಕಳುಹಿಸಲಾಗುವುದು.
2. ಡಿ.ಬಿ.ಟಿ ವೇದಿಕೆಯಲ್ಲಿ ಇಲಾಖೆಗಳಿಗೆ ಎರಡು Role ಇರುತ್ತದೆ (1) Authoriser (2) Approver. Approver role ಅನ್ನು ಇಲಾಖೆಯ ಸಕಾಲ ನೋಡಲ್ ಅಧಿಕಾರಿಯು ನಿರ್ವಹಿಸತಕ್ಕದ್ದು. Authoriser role ಅನ್ನು ಅವರ ಅಧೀನದ ಅಧಿಕಾರಿ/ಸಿಬ್ಬಂದಿಗೆ ವಹಿಸತಕ್ಕದ್ದು.
3. ಸದರಿ ಪರಿಹಾರ ವೆಚ್ಚವನ್ನು ಇಲಾಖೆಯಲ್ಲಿ ಈಗಾಗಲೇ ಎಸ್.ಬಿ.ಐ ಬ್ಯಾಂಕ್ ನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಯ ಮೂಲಕ ಅಥವಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರ ಈಗಾಗಲೇ ಎಸ್.ಬಿ.ಐ ಬ್ಯಾಂಕ್ ನಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆಯಿಂದ ಡಿ.ಬಿ.ಟಿ ವೇದಿಕೆ ಮೂಲಕ ಪಾವತಿಸತಕ್ಕದ್ದು. ಒಂದು ವೇಳೆ ಇಲಾಖಾ ಮುಖ್ಯಸ್ಥರಿಗೆ ಯಾವುದೇ ಬ್ಯಾಂಕ್ ಖಾತೆ ಲಭ್ಯವಿಲ್ಲದಿದ್ದಲ್ಲಿ ಹೊಸದಾಗಿ ಬ್ಯಾಂಕ್ ಖಾತೆಯನ್ನು ತೆರೆದು ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರಡಿಯ ನಿಯಮ 6(3)ರನ್ವಯ ಪಾವತಿಸಲು ಅನುಮತಿಸಲಾಗಿದೆ.
4. ಡಿಬಿಟಿ ವೇದಿಕೆಯಲ್ಲಿ Approver role ನಲ್ಲಿ ಇಲಾಖಾ ಸಕಾಲ ನೋಡಲ್ ಅಧಿಕಾರಿಯವರ Digital Signature Certificate ಬಳಸಿ ನಾಗರೀಕರಿಗೆ ಪರಿಹಾರ ವೆಚ್ಚವನ್ನು ಪಾವತಿಸತಕ್ಕದ್ದು. ಒಂದುವೇಳೆ ನೋಡಲ್ ಅಧಿಕಾರಿಗಳಿಗೆ DSC key ಲಭ್ಯವಿಲ್ಲದಿದ್ದಲ್ಲಿ ಇ-ಆಡಳಿತ ಇಲಾಖೆಯ ವತಿಯಿಂದ ಒದಗಿಸಿ ಕೊಡಲಾಗುವುದು.
5. ನೋಡಲ್ ಅಧಿಕಾರಿಯು ಪರಿಹಾರ ವೆಚ್ಚವನ್ನು ಪಾವತಿಸುವ ಸಂದರ್ಭದಲ್ಲಿ ಕರ್ನಾಟಕ ಸಕಾಲ ಸೇವೆಗಳ ನಿಯಮಗಳು, 2012ರಡಿಯ ನಿಯಮ 6(3)ನ್ನು ಪಾಲಿಸತಕ್ಕದ್ದು.
6. ಪರಿಹಾರ ವೆಚ್ಚ ಕೋರಿ ಸಲ್ಲಿಸುವ ಅರ್ಜಿಗಳ ವಿಲೇವಾರಿಯನ್ನು 07 ದಿನಗಳ ಕಾಲಮಿತಿಯನ್ನು ನಿಗದಿಪಡಿಸಿ ಸಕಾಲ ಸೇವೆಯನ್ನಾಗಿ ಪರಿಗಣಿಸಿ ಆದೇಶಿಸಿದೆ.
7. ಡಿ.ಬಿ.ಟಿ ವೇದಿಕೆಯಲ್ಲಿ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಲು ಇಲಾಖಾ ನೋಡಲ್ ಅಧಿಕಾರಿಗಳ ಸಹಾಯಕ್ಕೆ, ಸಕಾಲ ತಾಂತ್ರಿಕ ತಂಡ, ಇ-ಆಡಳಿತ ಕೇಂದ್ರದ ಡಿ.ಬಿ.ಟಿ ಸೆಲ್ ಹಾಗೂ ಇಲಾಖಾ ನೋಡಲ್ ಅಧಿಕಾರಿಗಳೊಂದಿಗೆ ಸಮನ್ವಯಿಸಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಕಾಲ ಮಿಷನ್‌ನಲ್ಲಿ ಒಬ್ಬ ಸಮನ್ವಯ ಅಧಿಕಾರಿಯನ್ನು ನೇಮಿಸಲಾಗುವುದು. ಸಮನ್ವಯ ಅಧಿಕಾರಿಯು ಎಲ್ಲಾ ಇಲಾಖೆಗಳ ನೋಡಲ್ ಅಧಿಕಾರಿಯೊಂದಿಗೆ ಸಮನ್ವಯಿಸಿ ಅವಶ್ಯಕವಿರುವ ಕ್ರಮವನ್ನು ಡಿ.ಬಿ.ಟಿ ಸೆಲ್ ನೊಂದಿಗೆ ಸಮನ್ವಯಿಸುತ್ತಾರೆ. ಈ ಯೋಜನೆಗೆ ಸಂಬಂದಿಸಿದಂತೆ ಇಲಾಖೆಗಳು ನೇರವಾಗಿ ಡಿಬಿಟಿ ಸೆಲ್ ಅನ್ನು ಸಂಪರ್ಕಿಸುವುದಿಲ್ಲ.
8. ಇಲಾಖಾ ಮುಖ್ಯಸ್ಥರು ಕಾಲ ಕಾಲಕ್ಕೆ ಸಕಾಲ ವ್ಯವಸ್ಥೆಯಲ್ಲಿ ಪ್ರತಿ ಹೆಸರಿಸಲಾದ ಅಧಿಕಾರಿಯ ವಿಳಂಬದಿಂದಾಗಿ ಸ್ವೀಕರಿಸಲ್ಪಟ್ಟ ಮೇಲ್ಮನವಿ ಅರ್ಜಿಗಳನ್ನು ಪರಿಶೀಲಿಸಿ ಸಂಬಂದಪಟ್ಟ ಅಧಿಕಾರಿ/ಸಿಬ್ಬಂದಿ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
9. ನಾಗರೀಕರಿಗೆ ಪರಿಹಾರ ವೆಚ್ಚವನ್ನು ಒದಗಿಸುವ ಸಲುವಾಗಿ ಬಳಸಲಾಗುವ ಬ್ಯಾಂಕ್ ಖಾತೆಯಲ್ಲಿ ಅನುದಾನ ಲಭ್ಯತೆಯನ್ನು ಖಚಿತ ಪಡಿಸಿಕೊಳ್ಳುವುದು ಸಕಾಲ ನೋಡಲ್ ಅಧಿಕಾರಿಯ ಜವಬ್ದಾರಿಯಾಗಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD 691 exp 12 2021 ದಿ: 01.01.2022, ಟಿಪ್ಪಣಿ ಸಂಖ್ಯೆ: FD 434 FR 2021 ದಿ: 01.02.2022 ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿ:05.04.2021ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರಗಳನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,

(ಎಲ್.ಸಿ.ನಾಗರಾಜು)
ಆಡಳಿತಾಧಿಕಾರಿ
ಸಕಾಲ ಮಿಷನ್
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್. ಎಸ್. ಎ) ಮತ್ತು (ಇ.ಆರ್ & ಎಸ್. ಎ), ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂಖ್ಯೆ 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಎ & ಇ) ಮುಖ್ಯ ಕಟ್ಟಡ, ಬೆಂಗಳೂರು – 560001.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ.
4. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು – ತಮ್ಮ ಅಧೀನ / ಕ್ಷೇತ್ರ ಇಲಾಖೆಗಳಿಗೆ ಈ ಕುರಿತು ಸೂಚನೆಗಳನ್ನು ನೀಡುವಂತೆ ಕೋರಿದೆ.
5. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ / ಆಯವ್ಯಯ ಮತ್ತು ಸಂಪನ್ಮೂಲ), ವಿಧಾನಸೌಧ.
6. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು. (ಸ್ವೀಕೃತಿ ಮತ್ತು ರವಾನೆ ಶಾಖೆಯ ಮೂಲಕ)
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು (ಸ್ವೀಕೃತಿ ಮತ್ತು ರವಾನೆ ಶಾಖೆಯ ಮೂಲಕ)
9. ಯೋಜನಾ ನಿರ್ದೇಶಕರು, ನೇರ ನಗದು ವರ್ಗಾವಣೆ (DBT), ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಸೇವೆಗಳು-2 ಮತ್ತು ವೆಚ್ಚ-12)
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

3. ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.